ಗಂಧದ ಮರ ಕಳ್ಳಸಾಗಾಣಿಕೆ

(೨೬) ೭೭ ಶ್ರೀ ಯು. ಭೂಪತಿ (ಸಂಡೂರು).— ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗಂಧದ ಮರದ ಕಳ್ಳಸಾಗಾಣಿಕೆಯ ವಿಷಯ ಸರಕಾರದವರ ಗಮನಕ್ಕೆ ಬಂದಿದೆಯೆ ?

ಆ) ಸಂಡೂರು ಅರಣ್ಯ ವಿಭಾಗದ ಕೆಲಸಗಾರರ ಸಂಖ್ಯೆಯನ್ನು ಹೆಚ್ಚಿಸುವ ಮತ್ತು ಅರಣ್ಯಾಧಿಕಾರಿಗಳಿಗೆ ವಾಹನವನ್ನು ಒದಗಿಸುವ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ.

ಇ) ಅರಣ್ಯ ಇಲಾಖೆಯ ಇಬ್ಬರು ಅರಣ್ಯ ಪಾಲಕರು ೧೩ ಅರಣ್ಯ ರಕ್ಷಕರು ಸಂಡೂರು ವಲಯದ ಗಂಧದ ಮರಗಳನ್ನು ರಕ್ಷಿಸುತ್ತಿದ್ದಾರೆ. ಇದರೊಂದಿಗೆ ೯ ಅರಣ್ಯ ವೀಕ್ಷಕರನ್ನು ಗಂಧದ ಮರದ ರಕ್ಷಣೆಗೊಸ್ಕರವಾಗಿಯೇ ಪ್ರತ್ಯೇಕವಾಗಿ ದಿನಗೂಲಿಯ ಮೇಲೆ ನೇಮಿಸಲಾಗಿದ್ದು ಅವರು ಕಳ್ಳಸಾಗಾಣಿಕೆದಾರರ ಚಲನವಲನಗಳನ್ನು ನಿಗಾ ಇಟ್ಟಿರುತ್ತಾರೆ. ಎಲ್ಲಿ ಹೆಚ್ಚಿನ ಗಂಧದ ಮರಗಳು ಇವೆಯೋ ಅಲ್ಲಿ ವಿಶೇಷವಾಗಿ ಹಳ್ಳಿಗಳಲ್ಲಿ ರಾತ್ರಿಯಲ್ಲಿ ಗಸ್ತು ಮತ್ತು ಬಿಡಾರವನ್ನು ಮಾಡಲಾಗಿರುತ್ತದೆ. ರಾತ್ರಿ ಶಿಬಿರಗಳನ್ನು ಕ್ರಮಬದ್ಧವಾಗಿ ನೇಮಿಸಲಾಗುತ್ತಿದೆ. ಆಯಕಟ್ಟಿನ ಜಾಗಗಳಲ್ಲಿ ಗುಡಿಸಲುಗಳನ್ನೂ ವಂತಿ ಗ್ರಾಮೀಣ ಪ್ರದೇಶದಲ್ಲಿ ಮತ್ತು ಗ್ರಾಮಗಳ ರೈಲ್ವೆ ನಿಲ್ದಾಣದ ಹತ್ತಿರ ನಿರ್ಮಿಸಲಾಗುತ್ತಿದ್ದು ಕಳ್ಳಸಾಗಾಣಿಕೆದಾರರ ಚಲನವಲನಗಳನ್ನು ವೀಕ್ಷಿಸಲಾಗುತ್ತಿದೆ. ಸಂಡೂರು ವಲಯದ ಅರಣ್ಯಾಧಿಕಾರಿಗಳಿಗೆ ಈ ಕಾರ್ಯಕ್ಕಾಗಿ ಪ್ರತ್ಯೇಕವಾಗಿ ಒಂದು ಜೀಪನ್ನು ಸಹ ಅವರಿಗೆ ಒದಗಿಸಲಾಗಿದೆ.

ಹೊಂಬೇಗೌಡ ನಗರದಲ್ಲಿರುವ ವಸತಿ ಗೃಹಗಳಿಗೆ ಹೆಚ್ಚಿನ ಸೌಲಭ್ಯ

೨೭ (೬೬) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೨)ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಜನವರಿ ತಿಂಗಳಲ್ಲಿ ಹೊಂಬೇಗೌಡ ನಗರದಲ್ಲಿರುವ ಸರ್ಕಾರಿ ವಸತಿಗೃಹಗಳಿಗೆ ಹೆಚ್ಚಿನ ಸೌಲಭ್ಯ ಒದಗಿಸುವ ಸಲುವಾಗಿ ಅಲ್ಲಿಗೆ ಭೇಟಿ ನೀಡಿದುದು ನಿಜವೇ ?

ಆ) ಅಲ್ಲಿನ ನಿವಾಸಿಗಳ ಸಂಘವಾದ ಜಾಗೃತ ಸಮಿತಿ ಜೀವನಭೀಮಾನಗರ ಹಾಗೂ ತಿಮ್ಮೇನಹಳ್ಳಿಯ ವಸತಿ ಗೃಹಗಳಿಗೆ ಕಲ್ಪಿಸಿರುವ ಎಲ್ಲಾ ಸೌಲಭ್ಯಗಳನ್ನೂ ಕಲ್ಪಿಸಬೇಕೆಂದು ಕೋರಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಸಂಬಂಧಪಟ್ಟ ಲೋಕೋಪಯೋಗಿ ಅಧಿಕಾರಿಗಳು ಅದರ ಅಂದಾಜು ಮೆಚ್ಚಗಳನ್ನು ಕಳಂಹಿಸಿರುವುದು ಹಾಗೂ ಅವುಗಳನ್ನು ಸರ್ಕಾರದವರು ಮಂಜೂರು ಮಾಡುವಲ್ಲಿ ತಾರತಮ್ಯವೆಸಗಿರುವುದು ನಿಜವೇ ?

ಇ) ಹಾಗಿದ್ದಲ್ಲಿ ಹೊಂಬೇಗೌಡ ನಗರ ಹಾಗೂ ರಾಜಾಜಿನಗರ ವಸತಿಗೃಹಗಳ ತಾಪನ ಸಂಚಾರದ ಸಂಬಂಧದಲ್ಲಿ ಅಲ್ಲಿನ ಸಂಘದವರು ಕಳೆದ ಎರಡು ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದಾರೆ ಈ ವಸತಿಗೃಹಗಳನ್ನು ಕಡೆಗಣಿಸಿ ಇತ್ತೀಚೆಗೆ ಬೇಡಿಕೆ ಸಲ್ಲಿಸಿದ್ದ ತಿಮ್ಮೇನಹಳ್ಳಿ ವಸತಿಗೃಹದವರಿಗೆ ತಾವನ ಸಂಚಾರ ಸೌಲಭ್ಯವನ್ನು ಕಲ್ಪಿಸಿರುವುದರ ಔಚಿತ್ಯವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು).—

ಅ) ನಿಜ

ಆ) ಹೊಂಬೇಗೌಡ ನಗರದಲ್ಲಿರುವ ಸರ್ಕಾರಿ ವಸತಿ ಗೃಹಗಳಿಗೆ ಸರ್ವವಿದ್ಯುತ್ ಸಂಪರ್ಕ (ಎ. ಇ. ಹೆಚ್.)ಅಳವಡಿಸಲು ೧೧.೫೦ ಲಕ್ಷ ರೂಪಾಯಿಗಳ ಅಂದಾಜು ಬಂದಿದ್ದು ಅದನ್ನು ಪರಿಶೀಲಿಸಲಾಗುತ್ತಿದೆ. ಈ ಕಟ್ಟಡಗಳ (ಇಂಪ್ರೂವ್‌ಮೆಂಟ್‌ಗಾಗಿ) ಸುಧಾರಣೆಗಾಗಿ ಅಂದಾಜನ್ನು ಸಿದ್ಧಪಡಿಸಲಾಗುತ್ತಿದೆ. ವಿದ್ಯುತ್ ಫ್ಯಾನುಗಳನ್ನು ಅಳವಡಿಸಲು ೩.೫೬ ಲಕ್ಷ ರೂಪಾಯಿಗಳ ಅಂದಾಜನ್ನು ತಯಾರಿಸಲಾಗಿದೆ.

ಇ) ತಿಮ್ಮೇನಹಳ್ಳಿಯ ವಸತಿಗೃಹಗಳಿಗೆ ವಿದ್ಯುತ್‌ಸ್ಥಾವರಗಳನ್ನು ಅಳವಡಿಸುವ ೯೭,೦೦೦ ರೂಪಾಯಿಗಳ ಅಂದಾಜಿಗೆ ೭.೧೨.೧೯೮೫ರ ಸರ್ಕಾರಿ ಆಜ್ಞೆಯಲ್ಲಿ ಮಂಜೂರಾತಿ ಕೊಡಲಾಗಿದೆ. ಹೊಂಬೇಗೌಡ ನಗರ ಹಾಗೂ ರಾಜಾಜಿನಗರದ ವಸತಿಗೃಹಗಳಿಗೆ ಸಂಬಂಧಿಸಿದ ಅಂದಾಜುಗಳನ್ನು ೭.೧೨.೧೯೮೫ರ ನಂತರ ತಯಾರಿಸಲಾಗಿದೆ ಹಾಗೂ ಈ ಅಂದಾಜುಗಳ ಮೊತ್ತ ರೂ.೫ ಲಕ್ಷಕ್ಕೆ ಮೀರಿರುವುದರಿಂದ ಸಂಪನ್ಮೂಲಗಳು ದೊರಕುವ ಸಾಧ್ಯತೆಯನ್ನು ಅನುಸರಿಸಿ ಮುಂಜೂರಾತಿ ನೀಡಬೇಕಾಗುತ್ತದೆ. ಅಂದಾಜುಗಳು ಸರ್ಕಾರದ ಪರಿಶೀಲನೆಯಲ್ಲಿವೆ.

ಸರಕಾರಿ ನೌಕರರ ವಸತಿ ಗೃಹಗಳಲ್ಲಿ ಕುಡಿಯುವ ನೀರಿನ ಅಭಾವ

೯೪. ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಆ) ಹೊಂಬೇಗೌಡ ನಗರದಲ್ಲಿರುವ ಸರ್ಕಾರಿ ನೌಕರರ ವಸತಿ ಗೃಹಗಳಲ್ಲಿ ಕುಡಿಯುವ ನೀರಿನ ಅಭಾವದಿಂದಾಗಿ ಅಲ್ಲಿನ ನಿವಾಸಿಗಳು ಸಾಕಷ್ಟು ಬವಣೆಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಅಲ್ಲಿ ಸಾಕಷ್ಟು ಕೊಳವೆ ಬಾವಿಗಳಿದ್ದಾಗ್ಯೂ ಈ ರೀತಿಯ ಅಭಾವಕ್ಕೆ ಕಾರಣಗಳೇನು ? ಹಾಗೂ ಅಲ್ಲಿನ ಎಲ್ಲಾ ಕೊಳವೆ ಬಾವಿಗಳು ಕಾರ್ಯನಿರ್ವಹಿಸುತ್ತಿವೆಯೇ ? ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ;

ಇ) ನೀರಿನ ಬವಣೆ ತಪ್ಪಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ನೀರಾವರಿ ಮಂತ್ರಿಗಳು).—

ಆ) ದೂರು ಬಂದಿದೆ.

ಆ) ಅಲ್ಲಿ ಒಟ್ಟು ಮೂರು ಕೊಳವೆ ಬಾವಿಗಳು ಇವೆ. ಅದರಲ್ಲಿ ಎರಡು ಕೊಳವೆ ಬಾವಿಗಳು ನಿರುಪಯೋಗವಾಗಿವೆ ಉಪಯೋಗಿಸುತ್ತಿರುವ ಒಂದು ಕೊಳವೆ ಬಾವಿ ಇಂದ ನೀರಿನ ಸರಬರಾಜು ಸಮರ್ಪಕವಾಗಿದೆ ಹಾಗೂ ಬೆಂಗಳೂರು ಜಲಮಂಡಲಿ ಇಂದಲೂ ನೀರು ಸರಬರಾಜಾಗುತ್ತಿದೆ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಸತಿ ಗೃಹಗಳಿಗೆ ಸಂಬಂಧಿಸಿದ ಕಾನೂನನ್ನು ಉಲ್ಲಂಘಿಸಿರುವುದು

೯೭. ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಲೋಕೋಪಯೋಗಿ ಜಲಾನಯನ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ದಯವಿಟ್ಟು ಉತ್ತರಿಸುವರೇ:—

ಆ) ಬೆಂಗಳೂರು ನಗರದಲ್ಲಿ ರಾಜ್ಯ ಸರಕಾರಿ ನೌಕರರಿಗೂ ಮತ್ತು ಅಧಿಕಾರಿಗಳಿಗೂ ಸರಕಾರವು ಒದಗಿಸಿರುವ ವಸತಿ ಗೃಹಗಳ (ಕ್ವಾಟರ್ಸ್) ಸಂಖ್ಯೆ ಎಷ್ಟು ಹಾಗೂ ಅವು ನಗರದ ಯಾವ ಯಾವ ಸ್ಥಳಗಳಲ್ಲಿ ಎಷ್ಟೆಷ್ಟು ಇದೆ.

ಆ) ವಸತಿ ಗೃಹಗಳಲ್ಲಿ ವಾಸಿಸುತ್ತಿರುವ ಅಧಿಕಾರಿಗಳ, ನೌಕರರ ಹೆಸರು, ಪದನಾಮ ಹಾಗೂ ಕಚೇರಿಗಳ ವಿಳಾಸವೇನು ?